ಮಾಗಡಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿರುವ ಪದವಿ ಕಾಲೇಜುಗಳ ಕೊಠಡಿ ಸಮಸ್ಯೆ ಕುರಿತು.

26 (304) ಶ್ರೀ ಬಾಲಕೃಷ್ಣ ಹೆಚ್.ಸಿ. [ಮಾಗಡಿ]

ಶ್ರೀ ಅರವಿಂದ ಲಿಂಬಾವಳಿ (ಮಾನ್ಯ ಉನ್ನತ ಶಿಕ್ಷಣ ಸಚಿವರು)

ಅ) ಮಾಗಡಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿ ಯಲ್ಲಿರುವ ಪದವಿ ಕಾಲೇಜುಗಳು ಯಾವುವು; ಅವುಗಳಲ್ಲಿರುವ ವಿಭಾಗಗಳು ಹಾಗೂ ಪ್ರತಿ ವಿಭಾಗದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ವಿವರ ನೀಡುವುದು;

ಮಾಗಡಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಮಾಗಡಿ ಮತ್ತು ಕುದೂರು ಪ್ರಥಮ ದರ್ಜೆ ಕಾಲೇಜುಗಳು ಬರುತ್ತವೆ. ಆ ಕಾಲೇಜುಗಳಲ್ಲಿನ ವಿದ್ಯಾರ್ಥಿಗಳ ಸಂಖ್ಯೆ ಈ ಕೆಳಕಂಡಂತಿದೆ.

ಕ್ರ ಸಂ.	ಕಾಲೇಜಿನ ಹೆಸರು	ವಿದ್ಯಾರ್ಥಿಗಳ ಸಂಖ್ಯೆ
1	ಮಾಗಡಿ ಸ.ಪ್ರ.ದ	526
2	ಕುದೂರು ಸ.ಪ್ರ.ದ	230

ಆ) ಪದವಿ ಕಾಲೇಜುಗಳಲ್ಲಿ ಎಷ್ಟೆಷ್ಟು ಕೊಠಡಿಗಳ ಕೊರತೆಯಿದೆ ಎಂಬುದನ್ನು ತಿಳಿಸುವುದು;

1. ಮಾಗಡಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ 10 ಕೊಠಡಿಗಳ ಕೊರತೆ ಬಗ್ಗೆ ಬೇಡಿಕೆ ಇದೆ.

2) ಕುದೂರು. ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕೊಠಡಿಗಳ ಕೊರತೆ ಬಗ್ಗೆ ಬೇಡಿಕೆ ಬಂದಿರುವುದಿಲ್ಲ.

ಇ) ಈಗಾಗಲೇ ಈ ಕೊಠಡಿಗಳ ತೀವ್ರವಾದ ಕೊರತೆ ಹಾಗೂ ಈ ಕಾಲೇಜುಗಳಿಗೆ ಮೂಲ ಸೌಕರ್ಯಗಳನ್ನು ಒದಗಿಸಿಕೊಡಬೇಕೆಂದು ಸಲ್ಲಿಸಿರುವ ಬೇಡಿಕೆಗಳಿಗೆ ಯಾವ ಯಾವ ಕ್ರಮ ಗಳನ್ನು ಕೈಗೊಳ್ಳಲಾಗಿದೆ;

1) ಮಾಗಡಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ 2006–07ನೇ ಸಾಲಿನಲ್ಲಿ 21.00ಲಕ್ಷರೂಗಳ ಅಂದಾಜಿನ ಕಾಮಗಾರಿಗೆ ಅನುದಾನ ಒದಗಿಸಲಾಗಿದ್ದು, ಪ್ರಸ್ತುತ ಕಾಮಗಾರಿ ಪೂರ್ಣಗೊಂಡಿರುತ್ತದೆ. ಸದರಿ ಕಾಲೇಜಿನಲ್ಲಿ 10 ಕೊಠಡಿಗಳ ಬೇಡಿಕೆಗಾಗಿ 1.29ಕೋಟಿರೂಗಳ ರೇಖಾ ಅಂದಾಜು ಪಟ್ಟಿ ದಿನಾಂಕ:05–02–2009ರಂದು ಸ್ವೀಕೃತವಾಗಿರುತ್ತದೆ. 2008–09ನೇ ಸಾಲಿನ ಅನುದಾನವನ್ನು ಈಗಾಗಲೇ ಹಂಚಿಕೆ ಮಾಡಿ ವೆಚ್ಚ ಮಾಡಿರುವುದರಿಂದ ಈ ಮೊತ್ತವನ್ನು 2009–

10ನೇ ಸಾಲಿನ ಆಯವ್ಯಯದಲ್ಲಿ ಒದಗಿಸಲು ಕ್ರಮ ಕೈಗೊಳ್ಳಲಾಗುವುದು. ಸದರಿ ಕಾಲೇಜಿಗೆ ಮೂಲಭೂತ ಸೌಕರ್ಯಗಳಾದ ಗ್ರಂಥಾಲಯ, ಪೀಠೋಪಕರಣ, ಕಛೇರಿ ವೆಚ್ಚ, ವಿದ್ಯುತ್ ಮತ್ತು ನೀರು ಮುಂತಾದ ವೆಚ್ಚಗಳಿಗಾಗಿ 2008–09ನೇ ಸಾಲಿನಲ್ಲಿ ರೂ.2,66,600/– ಗಳನ್ನು ಒದಗಿಸಲಾಗಿದೆ.

2) ಕುದೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕಟ್ಟಡ ಕಾಮಗಾರಿಗೆ 2006–07ನೇ ಸಾಲಿನಲ್ಲಿ 15.00ಲಕ್ಷ ಮತ್ತು 25.00ಲಕ್ಷರೂಗಳಂತೆ ಒಟ್ಟು 40.00ಲಕ್ಷರೂಗಳ ಅನುದಾನ ಒದಗಿಸಲಾಗಿದೆ. ಈ ಪೈಕಿ ಒಂದು ಕಾಮಗಾರಿ ಮುಕ್ತಾಯ ಹಂತದಲ್ಲಿದ್ದು, ಎರಡನೇ ಕಾಮಗಾರಿಗೆ 2008–09ನೇ ಸಾಲಿನಲ್ಲಿ 18.00ಲಕ್ಷರೂಗಳನ್ನು ಒದಗಿಸಲಾಗಿರುತ್ತದೆ. ಕಾಮಗಾರಿ ಪ್ರಗತಿಯಲ್ಲಿದೆ. ಸದರಿ ಕಾಲೇಜಿಗೆ ಮೂಲಭೂತ ಸೌಕರ್ಯಗಳಾದ ಗ್ರಂಥಾಲಯ, ಪೀಠೋಪಕರಣ, ಕಛೇರಿ ವೆಚ್ಚ, ವಿದ್ಯುತ್ ಮತ್ತು ನೀರು ಮುಂತಾದ ವೆಚ್ಚಗಳಿಗಾಗಿ 2008–09ನೇ ಸಾಲಿನಲ್ಲಿ ರೂ.2,29,600/–ಗಳನ್ನು ಒದಗಿಸಲಾಗಿದೆ.

ಈ) ಇನ್ನೆಷ್ಟು ದಿನದಲ್ಲಿ ಈ ಕೊಠಡಿಗಳ ಕೊರತೆ ಹಾಗೂ ಮೂಲಭೂತ ಸೌಕರ್ಯಗಳ ಕೊರತೆಯನ್ನು ನಿವಾರಿಸಲಾಗುವುದು?

ಮುಂದಿನ ಸಾಲಿನಲ್ಲಿ ಅನುದಾನ ಲಭ್ಯತೆ ಹಾಗೂ ಬೇಡಿಕೆಯನ್ನಾಧರಿಸಿ, ಕೊಠಡಿಗಳ ಕೊರತೆ ಹಾಗೂ ಮೂಲಭೂತ ಸೌಕರ್ಯಗಳನ್ನು ನಿವಾರಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಹೆಚ್.ಸಿ.ಬಾಲಕೃಷ್ಣ: ಮಾನ್ಯ ಅಧ್ಯಕ್ಷರೆ, ಸರ್ಕಾರದಿಂದ ಉತ್ತರ ಬಂದಿದೆ. ಇದರಲ್ಲಿ ಮಾಗಡಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ 10 ಕೊಠಡಿಗಳ ಕೊರತೆ ಇದೆಯೆಂದು ಉತ್ತರ ಕೊಟ್ಟಿದ್ದಾರೆ. ನಾವು ಕಳೆದ ಸಾಲಿನಲ್ಲೂ ಬೇಡಿಕೆಯನ್ನು ಇಟ್ಟಿದ್ದೆವು. ಅದಕ್ಕೂ ಕೂಡ ಸರ್ಕಾರ ಸ್ಪಂದಿಸಿಲ್ಲ. ಈಗ ಖಾಸಗಿಯವರ ಬಾಡಿಗೆ ಶೆಡ್‌ನಲ್ಲಿ ಶಾಲೆಗಳನ್ನು ನಡೆಸುತ್ತಿದ್ದಾರೆ. ಅವರು ಶೆಡ್‌ಗಳನ್ನು ಖಾಲಿ ಮಾಡಿಯೆಂದು ಒತ್ತಡವನ್ನು ತಂದಿದ್ದಾರೆ. ಈಗ ಅಲ್ಲಿ ಕೊಠಡಿಗಳಿಲ್ಲವೆಂದರೆ ಮಕ್ಕಳನ್ನು ಬೀದಿಯಲ್ಲಿ ಕೂಡಿಸಿಕೊಂಡು ಪಾಠವನ್ನು ಹೇಳುವಂಥ ಪರಿಸ್ಥಿತಿ ಇದೆ. ಆದುದರಿಂದ ದಯಮಾಡಿ 10 ಕೊಠಡಿಗಳನ್ನು ಈ ಸಾರಿ ಅನುದಾನದಲ್ಲಿ ಕೊಡುತ್ತೇವೆಂದು ಮಾನ್ಯ ಮಂತ್ರಿಯವರು ಹೇಳಬೇಕು. ಇದರ ಜೊತೆಗೆ ಅಲ್ಲಿ science college ಮಂಜೂರಾಗಿದೆ. ಅಲ್ಲಿ ಪ್ರಯೋಗಶಾಲೆ ಇಲ್ಲದೇ ಇರುವುದರಿಂದ ಈ science college ಅನ್ನು ಬೆಂಗಳೂರಿನ ವಿಜಯನಗರಕ್ಕೆ shift ಮಾಡಿದ್ದಾರೆ. ಅಲ್ಲಿಂದ ಮಕ್ಕಳು ಇಲ್ಲಿಗೆ ಬಂದು ಪ್ರಯೋಗ ಶಾಲೆಯನ್ನು ಉಪಯೋಗ ಮಾಡುತ್ತಿರುವಂಥಾದ್ದು ಆಗುತ್ತಿದೆ, ಮತ್ತೆ ಇಲ್ಲಿ ಟೀಚರ್ಸ್ ಕೊರತೆ ಇದೆ. ನಮ್ಮ

ತಾಲ್ಲೂಕು ಡಾ:ನಂಜುಂಡಪ್ಪನವರ ವರದಿಯಲ್ಲಿ ಅತ್ಯಂತ ಹಿಂದುಳಿದ ತಾಲ್ಲೂಕೆಂದು ಆಗಿದೆ. ಇಲ್ಲಿ ಮಕ್ಕಳಿಗೆ ವಿದ್ಯೆಯನ್ನು ಸರಿಯಾಗಿ ಕೊಡಲಿಲ್ಲವೆಂದರೆ ಸಮಸ್ಯೆಯಾಗುತ್ತದೆ. ಈಗ ಸರ್ಕಾರ ಬೇರೆ ಬೇರೆ ಕಾರ್ಯಕ್ರಮಗಳಿಗೆ ಹಣವನ್ನು ವೆಚ್ಚ ಮಾಡುತ್ತಿದೆ. ಅದರ ಬದಲು ಈ ಹಣವನ್ನು ಇದಕ್ಕೆ ಕೊಟ್ಟರೆ ಬಹಳಷ್ಟು ಅನುಕೂಲವಾಗುತ್ತದೆ. ಭಯೋತ್ಪಾದನೆ ವಿರೋಧಿ ಅಭಿಯಾನಕ್ಕೆ ಖರ್ಚು ಮಾಡುತ್ತಿರುವಂಥ ಹಣದ ಬಗ್ಗೆ ನಾನು ಇವತ್ತು ನೋಡಿದೆ. ಇಲ್ಲಿ ಕರೆದುಕೊಂಡು ಬರುವ ಹುಡುಗರಿಗೆ ಊಟಕ್ಕೂ ಹಣ, ಬಸ್ಸುಗಳಿಗೆ, ಟೆಂಪೊಗಳಿಗೆ ಹಣ, ಇವೆಲ್ಲಕ್ಕೂ ಕೊಡುವ ಬದಲು, ದಯಮಾಡಿ ಈ ಸಾರಿ ಅನುದಾನವನ್ನು ಒದಗಿಸಿಕೊಡಬೇಕೆಂದು ನಾನು ತಮ್ಮ ಮೂಲಕ ಸನ್ಮಾನ್ಯ ಮಂತ್ರಿಗಳಿಗೆ ಒತ್ತಾಯ ಮಾಡುತ್ತೇನೆ.

ಶ್ರೀ ಅರವಿಂದ ಲಿಂಬಾವಳಿ: ಮಾನ್ಯ ಅಧ್ಯಕ್ಷರೆ, ಮಾಗಡಿ ಮತ್ತು ಕುದೂರುನಲ್ಲಿರತಕ್ಕಂಥ ಕೊರತೆಗಳ ಬಗ್ಗೆ ಮಾನ್ಯ ಬಾಲಕೃಷ್ಣರವರು ನಮ್ಮ ಗಮನಕ್ಕೆ ತಂದಿದ್ದಾರೆ. ಇದು ಸರ್ಕಾರದ ಗಮನದಲ್ಲೂ ಇದೆ. ಈಗಾಗಲೆ ಈ ವರ್ಷದ ಬಜೆಟ್‌ನಲ್ಲಿ ಇದಕ್ಕೆ ಹಣವನ್ನು ಒದಗಿಸಲಾಗಿದೆ. ಇಲ್ಲಿ ನಿಶ್ಚಿತವಾಗಿ laboratoryಗಳು ಮತ್ತು ಗ್ರಂಥಾಲಯ ಇದೆಲ್ಲಾ ವ್ಯವಸ್ಥೆಯನ್ನು ಆದಷ್ಟು ಈ ವರ್ಷದಲ್ಲಿ ಮಾಡಬೇಕು. ತಮಗೆ ಗೊತ್ತಿದೆ, ಕಳೆದ ಸಲ ಹಣವನ್ನು ಕೊಟ್ಟಂಥ ಸಂದರ್ಭದಲ್ಲಿ P.W.D.ಯಿಂದ ಸ್ವಲ್ಪ ನಿಧಾನವಾದ ಕಾರಣಕ್ಕಾಗಿ ಕೊಠಡಿಗಳಾಗಲಿ ಅಥವಾ ಉಳಿದಂಥ ವ್ಯವಸ್ಥೆಗಳು ಸಿದ್ಧವಾಗಿರಲಿಲ್ಲ. ಈ ಸಾರಿ ಅದನ್ನು ಮೂರು agencyಗಳನ್ನಾಗಿ divide ಮಾಡಿ, ಆದಷ್ಟು ಈ ಕೆಲಸವನ್ನು ಬೇಗ ಮಾಡಬೇಕೆನ್ನುವ ಬಗ್ಗೆ ಕ್ರಮವನ್ನು ಇಲಾಖೆಯಿಂದ ಕೈಗೊಳ್ಳುತ್ತೇವೆ. ಇದು ನಿಶ್ಚಿತವಾಗಿ ಮುಂದಿನ ಶೈಕ್ಷಣಿಕ ವರ್ಷದಲ್ಲಿ ಆಗುವ ರೀತಿಯಲ್ಲಿ ಕ್ರಮವನ್ನು ಜರುಗಿಸುತ್ತೇವೆ. ಇನ್ನು ತಾವು ಏನು ಹೇಳಿದ್ದೀರಿ, ಅದು ವಿಜಯನಗರದಲ್ಲಿ ಆಗಿರುವ ಕಾಲೇಜನ್ನು ಮಾಗಡಿಯಲ್ಲೇ ವಾಪಸ್ಸು ಸಿಗುವ ಹಾಗೆ ನಿಶ್ಚಿತವಾಗಿ ನಾನು ಪ್ರಯತ್ನವನ್ನು ಮಾಡುತ್ತೇನೆ.

ಬಿಜಾಪುರದಲ್ಲಿರುವ ಮಹಿಳಾ ವಿಶ್ವವಿದ್ಯಾಲಯಕ್ಕೆ ನಾಮಕರಣ ಮಾಡುವ ಬಗ್ಗೆ.

29 (322) ಶ್ರೀ ಅಪ್ಪಸಾಹೇಬ(ಅಪ್ಪು)ಮಲ್ಲಪ್ಪ ಪಟ್ಟಣಶೆಟ್ಟಿ
ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣಸಚಿವರು)

ಅ) ಬಿಜಾಪುರದಲ್ಲಿರುವ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾನಿಲಯಕ್ಕೆ ಇದುವರೆಗೂ ಯಾವುದೇ ಹೆಸರಿನ ನಾಮಕರಣ ಮಾಡದೇ ಇರಲು ಕಾರಣವೇನು;